ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
Bruhat Bengaluru Mahanagara Palike

ಅಧೀಕ್ಷಕ ಅಭಿಯಂತರವರ ಕಛೇರಿ, ಮಿನಿ ವಿಧಾನ ಸೌಧ ಕಟ್ಟಡ, 3ನೇ ಮಹಡಿ, ಯಲಹಂಕ, ಬೆಂಗಳೂರು-560064.

ಸಂಖ್ಯೆ: ಅ.ಅ.(ಯ.ವ)/ತಾ.ಮ/04 /20-21 ದಿನಾಂಕ: 11/6/2020

"ತಾಂತ್ರಿಕ ಮಂಜೂರಾತಿ ಪತ್ರ"

ವಿಷಯ :- Development works in Sahakaranagara and Tatanagara Park and other allied works in ward no 08 Kodigehalli ರ ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ :- ಕಾರ್ಯಪಾಲಕ ಅಭಿಯಂತರರು (ಬ್ಯಾ.ವಿ) ರವರ ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ:ಕಾ.ಪಾ.ಅ./ಬ್ಯಾ.ವಿ/ಆ.ಮ/ 15 /2020-21, ದಿನಾಂಕ: 11/6/2020

ಪ್ರಸ್ತಾವನೆ:-

ಕಾರ್ಯಪಾಲಕ ಅಭಿಯಂತರರು (ಬ್ಯಾ.ವಿ) ರವರು ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು **ರೂ.75.00 ಲಕ್ಷಗಳ** ಮೊತ್ತಕ್ಕೆ ತಯಾರಿಸಿ, ಉಲ್ಲೇಖ (1)ರಂತೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ತಾಂತ್ರಿಕ ಮಂಜೂರಾತಿ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಕಾರ್ಯಪಾಲಕ ಅಭಿಯಂತರರು (ಬ್ಯಾ.ವಿ) ರವರ ಪ್ರಸ್ತಾವನೆಯನ್ನು ಪರಿಗಣಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸದರಿ Development works in Sahakaranagara and Tatanagara Park and other allied works in ward no 08 Kodigehalli ರ ಕಾಮಗಾರಿಯ ಅಂದಾಜು ಮೊತ್ತ **ರೂ. 75.00 ಲಕ್ಷಗಳ** ಮೊತ್ತಕ್ಕೆ 2019-20ನೇ ಸಾಲಿನ ಆಯವ್ಯಯ P-3602 ರಲ್ಲಿ ಮೀಸಲಿಟ್ಟಿರುವ ಅನುದಾನದಡಿಯಲ್ಲಿ ಜಾಬ್ ಸಂಖ್ಯೆ 008-20-000052 ನೀಡಲಾಗಿರುತ್ತದೆ. ಸದರಿ ಅಂದಾಜು ಪಟ್ಟಿಗೆ ಈ ಕಛೇರಿಯ ತಾಂತ್ರಿಕ ಮಂಜೂರಾತಿ ದಾಖಲಾತಿಯ ವಹಿಯ **ಕ್ರಮ ಸಂಖ್ಯೆ.04**, ಮತ್ತು **ಪುಟ ಸಂಖ್ಯೆ:15** ರಲ್ಲಿ ನೊಂದಾಯಿಸಿ **ರೂ. 75.00 ಲಕ್ಷಗಳಿಗೆ** ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ.

ಷರತ್ತುಗಳು :-

1. ಈ ಹಿಂದೆ ತಾಂತ್ರಿಕ ಮಂಜೂರಾತಿ ಅನುಮೋದನೆ ನೀಡಲಾದ ಅಂದಾಜುಗಳಲ್ಲಿನ ಬಾಬ್ತುಗಳು ಮತ್ತು ಬಾಬ್ತುಗಳ ಪರಿಮಾಣಗಳು ಈ ಅಂದಾಜಿನಲ್ಲಿ ಮರುಕಳಿದಿರುವುದಕ್ಕೆ ಪರಿಶೀಲಿಸಿ, ದೃಢೀಕರಿಸಿಕೊಂಡ ನಂತರವೇ ಈ ಕಾಮಗಾರಿಗಳನ್ನು ಕೈಗೊಳ್ಳುವಲ್ಲಿ ಸೂಕ್ತ ಕ್ರಮ ಅನುಸರಿಸತಕ್ಕದ್ದು.
2. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ಪ್ರಕಾರ ಕಾಮಗಾರಿಯ ಟೆಂಡರ್ ಕರೆಯುವಲ್ಲಿ ಸೂಕ್ತ ಕ್ರಮ ಅನುಸರಿಸತಕ್ಕದ್ದು.
3. ಅಂದಾಜುಪಟ್ಟಿಯ ಮೊತ್ತವು ಮಂಜೂರಾತಿಯಾದ ಮೊತ್ತಕ್ಕಿಂತ ಮೀರಬಾರದು, ಹಾಗೂ ಕಾಮಗಾರಿಗೆ ಮಂಜೂರಾದ ಮೊತ್ತದ ಹಣವನ್ನು ಅದೇ ಕಾಮಗಾರಿಗೆ ಉಪಯೋಗಿಸತಕ್ಕದ್ದು.
4. ಕಾಮಗಾರಿಯನ್ನು ಐ.ಆರ್.ಸಿ/ಐ.ಎಸ್. ಮಾರ್ಗ ಸೂಚಿಗಳಂತೆ, ಮತ್ತು ನಿಗಧಿತ ವಿಶಿಷ್ಟ ವಿವರಣೆಯ (Standard Specification) ಪ್ರಕಾರ ನಿರ್ವಹಿಸತಕ್ಕದ್ದು.
5. ಕಾಮಗಾರಿ ಪೂರ್ಣಗೊಂಡ ನಂತರ ನಿಗಧಿತ ಅವಧಿಯೊಳಗೆ ಯುಟಿಲೈಜೇಷನ್ ಪ್ರಮಾಣ ಪತ್ರ ಹಾಗೂ ಕಾಮಗಾರಿ ಪೂರ್ಣಗೊಂಡ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.
6. ಮಂಜೂರಾದ ಕಾಮಗಾರಿಯಲ್ಲಿ ಯಾವುದೇ ಬದಲಾವಣೆ ಅಥವಾ ಮಾರ್ಪಾಡು ಆಗಿದ್ದಲ್ಲಿ ಅನುಷ್ಠಾನ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ.
7. ಸದರಿ ಕಾಮಗಾರಿಗೆ ನೀಡಲಾದ ನಿವೇಶನದ ಲಭ್ಯತೆ ಬಗ್ಗೆ ಟೆಂಡರ್ ಕರಾರು ಮಾಡುವ ಮುನ್ನ ಧೃಡೀಕರಿಸಿ ಕೊಳ್ಳ ತಕ್ಕದ್ದು.
8. ನಿಗದಿಯಾದ ದರಪಟ್ಟಿಯಲ್ಲಿಲ್ಲದ ದರಗಳಿಗೆ (Data Rate) ಮತ್ತು ದರಗಳ ವಿವರಗಳಿಗೆ (Rate Analysis) ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯ ತಕ್ಕದ್ದು.

9. ತಳಪಾಯದ ವಿನ್ಯಾಸವನ್ನು ಸಿದ್ದಗೊಳಿಸಿ ಕೆಲಸ ಆರಂಭಿಸುವ ಮುನ್ನ ಈ ಕಛೇರಿಯ ಒಪ್ಪಿಗೆಯನ್ನು ಪಡೆಯತಕ್ಕದ್ದು.

10. ಪ್ರಸುತ್ತ ಉದ್ದೇಶಿಸಿರುವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದಕ್ಕೆ ಪೂರಕವಾಗಿ ಈ ಹಿಂದೆ ಅಭಿವೃದ್ಧಿ ಕಾಮಗಾರಿಗಳ ನಿರ್ವಹಣೆ ಅಂಶಗಳ ವಿವರಗಳನ್ನು ರಸ್ತೆ ಇತಿಹಾಸ (Road History) ಪ್ರಸ್ತಕದಲ್ಲಿ ಕಾಮಗಾರಿಯ ವಿವರಗಳನ್ನು ನಮೂದಿಸಿ ನಿರ್ವಹಿಸಿರುವುದರ ಬಗ್ಗೆ.

11. ಅಂದಾಜು ಪಟ್ಟಿಯಲ್ಲಿ ಅಳವಡಿಸಿರುವ ಇಡಗಂಟು ರೂಪದಲ್ಲಿ ಒದಗಿಸಲಾಗಿರುವ (LumpSum Provisions) ಮೊತ್ತಗಳಿಗೆ ಉಪಅಂದಾಜನ್ನು ತಯಾರಿಸಿ ಅನುಮೋದನೆ ಪಡೆಯ ತಕ್ಕದ್ದು.

12.ಸದರಿ ಕಾಮಗಾರಿಗೆ ಟೆಂಡರ್ ಆಹ್ವಾನಿಸುವಾಗ Stander Tender Document KW - 1/2/3/4 ಹಾಗೂ ಆಗಿಂದಾಗ್ಗೆ ಹೊರಡಿಸುವ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಟೆಂಡರ್ ಆಹ್ವಾನಿಸತಕ್ಕದ್ದು.

16. 13. ತೆರವುಗೊಳಿಸಿರುವ ಉಪಯುಕ್ತ ಸಾಮಾಗ್ರಿಗಳ ಬಗ್ಗೆ **MAS** ನ ವಹಿಯಲ್ಲಿ ದಾಖಲಿಸುವುದು ಹಾಗೂ ಈ ತರಹದ ಉಪಯುಕ್ತ ಸಾಮಾಗ್ರಿಗಳನ್ನು ಬೇರೆಡೆ ಉಪಯೋಗಿಸಿರುವ (ಮರು ಬಳಕೆ ಮಾಡಿರುವ) ಬಗ್ಗೆ ಪ್ರತ್ಯೇಕ ವಹಿಯಲ್ಲಿ ದಾಖಲಿಸಿ ದೃಢೀಕರಿಸಿಕೊಳ್ಳುವುದು.

14. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಮಾನ್ಯ ಆಯುಕ್ತರವರ ದಿನಾಂಕ:02/11/2017ರ ಆಂತರಿಕ ಕಛೇರಿ ಜ್ಞಾಪನೆ ಸಂಖ್ಯೆ:ಆ./ಪಿ.ಆರ್/5054/2017-18 ರಂತೆ ಕ್ರಮವಹಿಸುವುದು.

1/6/2020

ಅಧೀಕ್ಷಕ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1. ಕಾರ್ಯಪಾಲಕ ಅಭಿಯಂತರರು (ಬ್ಯಾ.ವಿ) ರವರ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. ಮುಖ್ಯ ಲೆಕ್ಕಾಧಿಕಾರಿಯವರ ಗಮನಕ್ಕೆ ಕಳುಹಿಸಿದೆ.
3. ಕಛೇರಿ ಕಡತಕ್ಕೆ.